**ದಿ:12.04.19 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು:** ಶ್ರೀ ಎಂ.ಎಸ್.ಬಿ. ವಕೀಲರಿಂದ:

ಈ ದಾವೆಯನ್ನು ನಾನು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ದಾವಾ ಆಸ್ತಿಯನ್ನು ಪ್ರತಿವಾದಿಯು ಸಾಗುವಳಿ ಮಾಡುತ್ತಿರುವುದರಿಂದ ಅದನ್ನು ನಮಗೆ ಬಿಡಿಸಿಕೊಡಬೇಕೆಂದು ಮಾಡಿದ್ದೇನೆ. ಪ್ರತಿವಾದಿಯು ಜೂನ್ 2014 ರಲ್ಲಿ ದಾವಾ ಆಸ್ತಿಯನ್ನು ವಶಪಡಿಸಿಕೊಂಡಿದ್ದಾರೆ. ಸರ್ವೆ ನಂಬರ್ 37/2 ರ ಮೂಲ ವಿಸ್ತೀರ್ಣ 48 ಎಕರೆ ಇದೆ. ಈ ಆಸ್ತಿಯಲ್ಲಿ ಕೆಲವು ವಿಸ್ತೀರ್ಣದ ಆಸ್ತಿಗಳು ಮಾರಾಟ ಆಗಿವೆ. ನಾನು ಮತ್ತು ನಮ್ಮ ತಂದೆಯ ಸಹೋದರ ಕೆ.ಎ.ಅಪ್ಪಯ್ಯ ಎಂಬುವವರು ಆ ರೀತಿ ಮಾರಾಟ ಮಾಡಿದ್ದೇವೆ. ನಾನು ಸರ್ವೆ ನಂಬರ್ 37/2 ರಲ್ಲಿ 7 ಎಕರೆ ಆಸ್ತಿಯನ್ನು ಮುತ್ತಣ್ಣ ಎಂಬುವವರಿಗೆ 1972 ರಲ್ಲಿ ಮಾರಾಟ ಮಾಡಿದ್ದೇನೆ. ಅಪ್ಪಯ್ಯ ಎಷ್ಟು ಎಕರೆ ಆಸ್ತಿಯನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಸರ್ವೆ ನಂಬರ್ 37/2 ರಲ್ಲಿ 13 ಉಪ ಸರ್ವೆ ನಂಬರ್ ಆಗಿರಬಹುದು. ಉಪ ಸರ್ವೆ ನಂಬರ್ ಗಳಲ್ಲಿ ನಾನು, ಮತ್ತು ಅಪ್ಪಯ್ಯನ ವಾರಸುದಾರರು ಯಾವುದೇ ಆಸ್ತಿಗಳನ್ನು ಕೃಷಿ ಮಾಡುತ್ತಿಲ್ಲ. ಸರ್ವೆ ನಂಬರ್ 37/2 ರಲ್ಲಿ ಈಗ 12 ಎಕರೆ ವಿಸ್ತೀರ್ಣ ಇದ್ದು, 5-6 ತಾಕುಗಳಲ್ಲಿ ಇದೆ. ಪ್ರತಿಯೊಂದು ತಾಕುಗಳಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ, ಎಲ್ಲಾ ತಾಕುಗಳನ್ನು ಸರ್ವೆ ಮಾಡಿಸಿಲ್ಲ. ಯಾವ ತಾಕುಗಳನ್ನು ಸರ್ವೆ ಮಾಡಿಸಿದ್ದೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂಬರ್ 37/2 ರಲ್ಲಿ ಎಷ್ಟು ತಾಕುಗಳನ್ನು ಸರ್ವೆ ಮಾಡಿಸಿದ್ದೇನೆ ಎಂದು ದಾಖಲೆಗಳನ್ನು ನೋಡದೆ ಹೇಳಲು ಆಗುವುದಿಲ್ಲ.

ಬೇರೆಯವರು ಈ ಆಸ್ತಿಯನ್ನು ಒತ್ತುವರಿ ಮಾಡಿದ್ದರಿಂದ ಸರ್ವೆ ಮಾಡಿಸಿದ್ದೇವು. ತೀಯರ ಶಾಂತಿ ಮತ್ತು ಅವರ ಸಹೋದರಿಯರು, ಮೂವೇರ ಕುಟ್ಟಪ್ಪ , ಆನೇಯಡ ಮುತ್ತಪ್ಪ, ಮಾಳೆಯಡ ಅಪ್ಪಚ್ಚ , ಮುಂಡಂಡ ನಾಣಯ್ಯ, ಪ್ರತಿವಾದಿ ಒತ್ತುವರಿ ಮಾಡಿದ್ದರು. ಈ ಆಸ್ತಿಯನ್ನು ಸರ್ಕಾರಿ ಸರ್ವೆ ಮಾಡಿಸಿದ್ದೇನೆ. ಸರ್ವೆ ನಂಬರ್ 37/2 ರ ಆಸ್ತಿಯು ಉಪ ಸರ್ವೆ ನಂಬರ್ ಗಳಾಗಿ ತಹಸೀಲ್ದಾರ್ ರವರ ಆದೇಶದ

ಮೇರೆಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 37/2ರ ಹೊರ ಮೈ ಮಾರ್ಪಡು ಆದ ಬಗ್ಗೆ ನನಗೆ ಗೊತ್ತಿಲ್ಲ.

ಈಗ ತೋರಿಸಿದ ನಕಾಶೆಯು ನೆಲಜಿ ಗ್ರಾಮದ ಗ್ರಾಮ ನಕಾಶೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಸದರಿ ನಕಾಶೆಯಲ್ಲಿ ನೆಲಜಿ ಗ್ರಾಮದ ನಕಾಶೆ ಎಂದು ಬರೆಯಲಾಗಿದೆ ಎಂದರೆ ಸರಿ. ಈ ನಕಾಶೆಯಲ್ಲಿ ಸರ್ವೆ ನಂಬರ್ 37/2ನ್ನು ತೋರಿಸಿದ್ದಾರೆ ಎಂದು ನಾನು ಆ ಬಗ್ಗೆ ಏನು ಹೇಳುವುದಿಲ್ಲ. ದಿಃ22.9.2012 ರಂದು ನಾನು ಸರ್ವೆ ನಂಬರ್ 37/2 ಮತ್ತು ಸರ್ವೆ ನಂಬರ್ 37/3ರ ಹದ್ದುಬಸ್ತು ಗುರುತಿಸಲು ತಹಸೀಲ್ದಾರ್ ರವರಿಗೆ ಅರ್ಜಿ ನೀಡಿದ್ದೆ ಎಂದರೆ ಸರಿ. ಸದರಿ ಅರ್ಜಿಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ನಿಡಿ-1 ಎಂದು ಗುರುತಿಸಲಾಯಿತು. ಬಾಜುದಾರರ ಹೆಸರನ್ನು ನಿಡಿ-1 ರಲ್ಲಿ ಬರೆದಿದ್ದೇನೆ ಎಂದರೆ ಸರಿ. ಸರ್ವೆ ಇಲಾಖೆಯಿಂದ ಅವರಿಗೆ ನೋಟೀಸ್ ನೀಡಿದ್ದಾರೆ ಎಂದರೆ ಸರಿ. ಸದರಿ ನೋಟೀಸ್ ನ್ನು ನಿಡಿ-2 ಎಂದು ಗುರುತಿಸಲಾಯಿತು. ಬಾಜುದಾರರು ಸರ್ವೆ ನೋಟೀಸ್ ನ್ನು ಪಡೆದುಕೊಂಡ ಬಗ್ಗೆ ಸಹಿ ಇದೆ ಎಂದರೆ ಸರಿ. ಹದ್ದು ಬಸ್ತಿನ ಸರ್ವೆ ಆದ ನಂತರ ಮಹಜರ್ ಮಾಡಿದ್ದಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-3 ಎಂದು ಗುರುತಿಸಲಾಯಿತು.

ನಿಡಿ-1 ರ ಅರ್ಜಿ ಜೊತೆ ನಾನು 2 ಆರ್.ಟಿ.ಸಿ.ಗಳನ್ನು ಕೊಟ್ಟಿದ್ದೆ ಎಂದರೆ ಸರಿ. ಅವುಗಳನ್ನು ನಿಡಿ-4 ಮತ್ತು ನಿಡಿ-5 ಎಂದು ಗುರುತಿಸಲಾಯಿತು. ನನ್ನ ಅರ್ಜಿಯ ಆಧಾರದ ಮೇಲೆ ಭೂ ಮಾಪಕರು ಸರ್ವೆ ನಕಾಶೆಯನ್ನು ಈಗ ತೋರಿಸಿದಂತೆ ತಯಾರು ಮಾಡಿದ್ದರು ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ 6 ಎಂದು ಗುರುತಿಸಲಾಯಿತು. ನಿಡಿ 6ರ ನಕಾಶೆಯಲ್ಲಿ ಪ್ರತಿವಾದಿ ಒತ್ತುವರಿ ಮಾಡಿದ ಬಗ್ಗೆ ತೋರಿಸಿಲ್ಲ ಎಂದರೆ ಅವರು ಒತ್ತುವರಿ ಮಾಡಿದ ಆಸ್ತಿಯನ್ನು ಅಳತೆ ಮಾಡಿಲ್ಲ. ಆ ಬಗ್ಗೆ ನಕಾಶೆಯ ಕೆಳಭಾಗದಲ್ಲಿ ಬರೆದಿದ್ದಾರೆ. ನಕಾಶೆಯಲ್ಲಿ ಸರ್ವೆ ನಂಬರ್ 37/3ರ ಆಸ್ತಿಯ ಪ್ರತಿವಾದಿಯ ಆಸ್ತಿ ಎಂದು ತೋರಿಸಿದ್ದಾರೆ ಎಂದರೆ ಸರಿ.

ನಿಪಿ 8ರ ನಕಾಶೆಯು ಸರ್ವೆ ನಂಬರ್ 37/2ರ ನಕಾಶೆ ಎಂದರೆ ಸರಿ.ಸರ್ವೆ ನಂಬರ್ 37/2ರ ಉತ್ತರಕ್ಕೆ ಇರುವ ರಸ್ತೆಯೇ ಈ ಆಸ್ತಿಯ ಉತ್ತರದ ಗಡಿ ಎಂದರೆ ಸರಿಯಲ್ಲ. ಸರ್ವೆ ಇಲಾಖೆಯವರೊಂದಿಗೆ ಶಾಮೀಲಾಗಿ ರಸ್ತೆಯಿಂದ ಉತ್ತರಕ್ಕೆ ಗಡಿ ಇದೆ ಎಂದು ತೋರಿಸಿದ್ದೇವೆ ಎಂದರೆ ಸರಿಯಲ್ಲ, ನೆಲಜಿ ಗ್ರಾಮದ ಮೂಲ

ನಕಾಶೆಯಲ್ಲಿ ನಿಪಿ 8ರ ನಕಾಶೆಯಂತೆ ಉತ್ತರದ ಗಡಿ ಗುರುತು ಇರುವುದಿಲ್ಲ ಎಂದರೆ ಸರಿಯಲ್ಲ. ನೆಲಜಿ ಗ್ರಾಮದ ಗ್ರಾಮ ನಕಾಶೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಈಗ ತೋರಿಸಿದ ಗ್ರಾಮ ನಕಾಶೆಯಲ್ಲಿ ನಿಪಿ 8ರಂತೆ ಉತ್ತರದ ಗಡಿ ಗುರುತು ಇಲ್ಲದ ಕಾರಣ ಆ ನಕಾಶೆಯನ್ನು ನಾನು ಒಪ್ಪುತ್ತಿಲ್ಲ ಎಂದರೆ ಸರಿಯಲ್ಲ. ದಿಃ5.4.2013 ರಲ್ಲಿ ಪ್ರತಿವಾದಿ ಮತ್ತು ಇತರರ ವಿರುದ್ದ ಒಂದು ಎಚ್ಚರಿಕೆಯ ಅರ್ಜಿ ಹಾಕಿದ್ದೆ ಎಂದರೆ ಸರಿ. ಪ್ರತಿವಾದಿ ನಮ್ಮ ಆಸ್ತಿಯನ್ನು ಒತ್ತುವರಿ ಮಾಡಲು ಪ್ರಯತ್ನ ಪಟ್ಟಿದ್ದರಿಂದ ಆ ಅರ್ಜಿ ಹಾಕಿದ್ದೆ. ಆ ಅರ್ಜಿಯಲ್ಲಿ ಒತ್ತುವರಿ ಮಾಡಲು ಪ್ರಯತ್ನ ಪಟ್ಟ ಬಗ್ಗೆ ಹೇಳಿಲ್ಲ ಎಂದರೆ ಸರಿ. ನಿಪಿ 8ರಲ್ಲಿ ಸರ್ವೆ ನಂಬರ್ 37/2ರ ಉತ್ತರಕ್ಕೆ ಇರುವ ರಸ್ತೆಯ ನಂತರ ಸರ್ವೆ ನಂಬರ್ 36 /3ರ ಉಪ ಸರ್ವೆ ನಂಬರ್ 36/20 ರ ಆಸ್ತಿ ಇದೆ ಎಂದರೆ ಅದು ಸರ್ವೆ ನಂಬರ್ 37/2ರ ಆಸ್ತಿ ಆಗಿದೆ. ರಸ್ತೆಯ ಉತ್ತರಕ್ಕೆ ಇರುವ ಆಸ್ತಿಯು ಪ್ರತಿವಾದಿಯ ಆಸ್ತಿ ಎಂದರೆ ಸರಿಯಲ್ಲ.

ನಾನು ಸಿ ಐ ಎಸ್ ಎಫ್ ನಲ್ಲಿ ಕೆಲಸ ಮಾಡುತ್ತಿದ್ದೆ. 2011ರಲ್ಲಿ ನಿವೃತ್ತಿ ಹೊಂದಿದ್ದೇನೆ. ಕೇಂದ್ರ ಸರ್ಕಾರದ ಕೈಗಾರಿಕಾ ಭದ್ರತೆ ಪಡೆಯಲ್ಲಿ ಇದ್ದು ಕೈಗಾರಿಕಾ ನೌಕರರಿಗೆ ಭದ್ರತೆ ಕೊಡುವ ಕೆಲಸ ಎಂದರೆ ಸರಿ. ನಮಗೆ ವಾರ್ಷಿಕ ರಜೆಗಳು ಇದ್ದವು ಎಂದರೆ ಸರಿ. ವಾರ್ಷಿಕ ಒಂದು ತಿಂಗಳು ರಜೆ ಇರುತ್ತಿತ್ತು ಎಂದರೆ ಸರಿ. ಅ ಸಮಯದಲ್ಲಿ ನಾನು ಪ್ರತಿ ಬಾರಿಯು ಊರಿಗೆ ಬರುತ್ತಿರಲಿಲ್ಲ. ಹೆಚ್ಚಿನ ಸಮಯ ಬಂದಿರಲಿಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು ನಮ್ಮ ತಾಯಿ ನೋಡಿಕೊಳ್ಳುತ್ತಿದ್ದರು. ನಿವೃತ್ತಿ ಆದ ನಂತರ ನಾನು ಯಾವಾಗಲೂ ಒಮ್ಮೆ ಮಾತ್ರ ಬರುತ್ತಿದೆ. ನಂತರವೂ ಸಹ ನಾನು ಸಿ ಬಿ ಐ ನಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದೇನೆ. ರಜೆ ಕಾಲದಲ್ಲಿ ಆಸ್ತಿಗಳನ್ನು ನೋಡಿಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ರಜೆ ಸಿಗುತ್ತಿರಲಿಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಒತ್ತುವರಿ ಮಾಡಿದ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿದ್ದೇನೆ. ಆ ದಾಖಲೆಗಳನ್ನು ಹಾಜರುಪಡಿಸಿಲ್ಲ. 2014ರ ನಂತರ ಸರ್ವೆ ಮಾಡಿಸಲು ನಾನು ಅರ್ಜಿ ಕೊಟ್ಟ ಬಗ್ಗೆ ನೆನಪಿಲ್ಲ, ಅದರೆ ಸರ್ವೆ ಆಗಿಲ್ಲ.ಪ್ರತಿವಾದಿಯು ದಾವಾ ಆಸ್ತಿಯನ್ನು ಒತ್ತುವರಿ ಮಾಡದ ಕಾರಣ ನಾನು ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಭೂ ಮಾಪಕರೊಂದಿಗೆ ಶಾಮೀಲಾಗಿ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಹೊಡೆದುಕೊಳ್ಳುವ ಸಲುವಾಗಿ ನಕಾಶೆಯನ್ನು ಸೃಷಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನೆಲಜಿ ಗ್ರಾಮದ ಸರ್ವೆ ನಕಾಶೆ ಮೊದಲ ಬಾರಿಗೆ ಯಾವಾಗ ಆಗಿದೆ ಎಂದು ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯನ್ನು ಹೊಡುಕೊಳ್ಳುವ ಸಲುವಾಗಿ ವಾದ ಪತ್ರದ ಆಸ್ತಿಯು ನನ್ನ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರು ಕ್ಲೇಮು ನಲ್ಲಿ ಪ್ರತಿವಾದಿ ನೀಡಿದ ಆಸ್ತಿ ವಿವರಣೆಯನ್ನು ನಾನು ನೋಡಿದ್ದೇನೆ. ಅದು ತಪ್ಪು ವಿವರಣೆ ಅಗಿದೆ. ನಾನು ಪ್ರತಿವಾದಿಗೆ ಮೋಸ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಹೇಳಿರುವಂತೆ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.
ಸಹಿ/-
(ವಿಜಯಕುಮಾರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.